(14) ಕಾಡುಗಳ್ಳ ವೀರಪ್ಪನ್‌ನಿಂದ ಚಾಮರಾಜನಗರ ಜಿಲ್ಲೆಯ ಮಂತ್ರಿಗಳು ಹಾಗೂ ಶಾಸಕರಿಗೆ ಪ್ರಾಣ ಬೆದರಿಕೆ ಎಂದು ಪತ್ರಿಕೆಯಲ್ಲಿ ವರದಿಯಾಗಿರುವುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಆದರೆ ಸದನದಲ್ಲಿ ಗೃಹ ಸಚಿವರು ಇಲ್ಲ ಇದಕ್ಕೆ ಯಾವ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆಂಬುದು ಗೊತ್ತಿಲ್ಲ. ಸರ್ಕಾರ ಒಬ್ಬ ಮಂತ್ರಿಯವರಿಗೆ ಮತ್ತು ಐದು ಜನ ಶಾಸಕರಿಗೆ ಕಾಡುಗಳ್ಳ ವೀರಪ್ಪನ್‌ನಿಂದ ಪ್ರಾಣಭಯವಿದ್ದು ಅವರಿಗೆ ರಕ್ಷಣೆ ಕೊಡುತ್ತಿದೆ ಎನ್ನುವ ಸುದ್ದಿ ಪತ್ರಿಕೆಯಲ್ಲಿ ಬಂದಿದೆ. ಈ ಶಾಸಕರುಗಳಿಗೆ ರಕ್ಷಣೆ ಕೊಡುತ್ತಿದ್ದೀರಾ? ಮತ್ತು ಏಕೆ ರಕ್ಷಣೆಯನ್ನು ಕೊಡುತ್ತಿದ್ದೀರಿ? ತಾವು ಮೊದಲು ರಕ್ಷಣೆ ಕೊಡುತ್ತಿದ್ದೀರಿ ಈಗ ಆ ರಕ್ಷಣೆಯನ್ನು ಇನ್ನು ಬಹಳಷ್ಟು ಬಿಗಿ ಮಾಡಿದ್ದೇವೆನ್ನುವಂತಹ ಸುದ್ದಿ ಪತ್ರಿಕೆಯಲ್ಲಿ ಬಂದಿದೆ. ಯಾವ್ಯಾವ ಶಾಸಕರುಗಳಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ, ಯಾವ ರೀತಿಯಲ್ಲಿ ಭದ್ರತೆಯನ್ನು ಕೊಡುತ್ತಿದ್ದಾರೆ, ಮತ್ತು ಆ ಮಂತ್ರಿ ಯಾರು, ಇದ್ದಾರೆ, ಅವರಿಗೂ ರಕ್ಷಣೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಅವರಿಗೆ ವೀರಪ್ಪನ್‌ನಿಂದ ಪ್ರಾಣ ರಕ್ಷಣೆ ಮಾಡಲಿಕ್ಕೆ ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಸರ್ಕಾರ ರಕ್ಷಣೆ ಕೊಡುತ್ತಿರುವಂತಹ ಆ ಐದು ಜನ ಶಾಸಕರು ಈ ಸದನದ ಸದಸ್ಯರು ಆಗಿದ್ದಾರೆ. ಅವರಿಗೆ ಯಾವ್ಯಾವ ರೀತಿಯ ರಕ್ಷಣೆಯನ್ನು ಕೊಡುತ್ತಿದ್ದಾರೆ. ಈ ವಿಷಯ ಮೊನ್ನೆ ಪತ್ರಿಕೆಯಲ್ಲೂ ಬಂದಿದೆ. ಅವರು ಯಾರ್ಯಾರೆಂದರೆ ಸನ್ಮಾನ್ಯ ಮಂತ್ರಿಗಳಾದ ನಾಗಪ್ಪನವರು, ಸಂತೇಮಾರನಹಳ್ಳಿ ಕ್ಷೇತ್ರದ ಶಾಸಕರಾದ ಶ್ರೀ ಕೃಷ್ಣಮೂರ್ತಿ, ಕೊಳ್ಳೆಗಾಲದ ಶಾಸಕರಾದ ಶ್ರೀ ಜಯಣ್ಣ, ಚಾಮರಾಜನಗರ ಕ್ಷೇತ್ರದ ಶ್ರೀ ವಾಟಾಳ್ ನಾಗರಾಜ್, ಗುಂಡ್ಲುಪೇಟೆ ಶಾಸಕರಾದ ಶ್ರೀ ಮಹದೇವ್ ಪ್ರಸಾದ್ ಇಷ್ಟು ಜನರಿಗೆ ರಕ್ಷಣೆ ಕೊಡುತ್ತೇವೆಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಶ್ರೀ ವಾಟಾಳ್ ನಾಗರಾಜ್‌ರವರನ್ನು ದಿನಾಲೂ ನೋಡುತ್ತಿದ್ದೇನೆ. ಅವರ ರಕ್ಷಣೆಗಾಗಿ ಯಾವ ಪೊಲೀಸರು ಬಂದಿದ್ದೇ ನೋಡಿಲ್ಲ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ನಿಮ್ಮ ಪಕ್ಕದಲ್ಲೇ ಸೀಟು ಏಕೆ ಹಾಕಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರಿಗೆ ನಾವೇ ರಕ್ಷಣೆ ಅಂತಾನಾ?

ಅಧ್ಯಕ್ಷರು: ನೀವು ಅವರ ಪಕ್ಕದಲ್ಲೇ ಇರುವಾಗ ಅವರನ್ನು ಯಾರು ಮುಟ್ಟುವವರು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಬಹಳ ಗಂಭೀರವಾಗಿದೆ. ಇದಕ್ಕೆ ಸರ್ಕಾರದವರು ಉತ್ತರ ಹೇಳಬೇಕು. ಇದರ ಬಗ್ಗೆ ಸರ್ಕಾರದವರು

ಸ್ಪಷ್ಟಪಡಿಸಬೇಕು. ನೀವು ಇವರಿಗೆ ರಕ್ಷಣೆಯನ್ನು ಕೊಟ್ಟಿದ್ದೀರಾ? ಈ ವಿಷಯ ನಿಜಾನಾ? ರಕ್ಷಣೆ ಕೊಟ್ಟಿದ್ದರೆ ಏಕೆ ಕೊಟ್ಟಿದ್ದೀರಿ? ಅದನ್ನು ಸರ್ಕಾರದವರು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು: ಅವರಿಗೆ ಪ್ರಾಣ ಬೆದರಿಕೆ ಇದೆಯೆಂದು ಹೇಳಿ ಪ್ರಚಾರ ಮಾಡಿ ಅವರಿಗೆ ಅವಮಾನ ಮಾಡುವಂಥಾದ್ದು, ಇದು ಗೆಳೆಯರಾಗಿ ಮಾಡುವಂಥ ಕೆಲಸವೇ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನಾವು ಪ್ರಚಾರ ಮಾಡಲಿಲ್ಲ. ಇದು ಪತ್ರಿಕೆಯಲ್ಲಿ ದೊಡ್ಡದಾಗಿ ಮುಖಪುಟದಲ್ಲಿ ಬಂದಿದೆ, ಪ್ರಾಣ ಬೆದರಿಕೆ ಹಾಕಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ನಾನು ಹೇಳುತ್ತಿರುವಂಥಾದ್ದು ಅಲ್ಲ.

ಅಧ್ಯಕ್ಷರು: ನೀವು ಮಾನ್ಯ ಪಾಟಾಳ್ ನಾಗರಾಜ್‌ರವರನ್ನು ಈಗ ವೀಕ್ ಮಾಡಿಬಿಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಬಂಡೀಪುರಕ್ಕೆ ಹೋಗಿರುವಂಥಾದ್ದು ನಿಜ. ಅಲ್ಲಿ ಅವರು ಎಲ್ಲವನ್ನೂ ನೋಡಿಕೊಂಡು ಬಂದು ವೀರಪ್ಪನ್ ಆ ಭಾಗದಲ್ಲಿ ಓಡಾಡುತ್ತಿದ್ದಾನೆ. ಹಿಂದೆ ಒಂದು ಸಾರಿ ಕೆಲವರನ್ನು ಅಪರಹರಿಸಿಕೊಂಡು ಹೋದಂತಹ ಹಿನ್ನಲೆಯಲ್ಲಿ ಕೆಲವು ಸುದ್ದಿಗಳ ಆಧಾರದ ಮೇಲೆ ಆ ಕಡೆ ಅವರು ಹೋಗಿದ್ದರು. ಮಾನ್ಯ ಮಂತ್ರಿಯವರು ಅಲ್ಲೆಲ್ಲಾ ಹೋಗಿ ಬಂದ ಮೇಲೆ ಎಷ್ಟು ಬಂದೋಬಸ್ತು ಮಾಡಬೇಕೋ ಅಷ್ಟನ್ನು ಮಾಡಿ ಬಂದಿದ್ದಾರೆ. ಇನ್ನು ಹೆಚ್ಚು ಮಾಹಿತಿ ಬೇಕೆಂದರೆ ಅದನ್ನು ತರಿಸಿ ಮಾನ್ಯ ಮಂತ್ರಿಯವರಿಂದ ಉತ್ತರವನ್ನು ಕೊಡಿಸೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ಹೇಳುತ್ತಿರುವಂಥಾದ್ದು ಇದಲ್ಲ, ಮಾನ್ಯ ಗೃಹ ಮಂತ್ರಿಗಳಾಗಿ ರೋಷನ್‌ಬೇಗ್‌ರವರು ಮತ್ತು ಪೊಲೀಸ್ ಅಧಿಕಾರಿಯಾದ ಶ್ರೀ ಶ್ರೀನಿವಾಸಲು(ಡಿ.ಜಿ.ಪಿ)ಯವರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿರುವಂತಹ ವಿಷಯವಾಗಿದೆ.

ಶ್ರೀ ಸಿದ್ಧರಾಮಯ್ಯ: ಅವರಿಗೆ ಮೊದಲಿನಿಂದಲೂ ರಕ್ಷಣೆ ಕೊಟ್ಟಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಅದನ್ನೇ ಕೇಳುತ್ತಿದ್ದೇನೆ. ಅವರಿಗೆ ಮೊದಲಿನಿಂದಲೂ ರಕ್ಷಣೆ ಕೊಟ್ಟಿದ್ದರು, ಈಗ ಮತ್ತೆ ಇನ್ನಷ್ಟು ಭದ್ರತೆಯನ್ನು ಜಾಸ್ತಿ ಮಾಡಿದ್ದಾರೆಂದು ಶ್ರೀ ರೋಷನ್‌ಬೇಗ್‌ರವರು ಮತ್ತು ಡಿ.ಜಿ.ಪಿ. ಶ್ರೀನಿವಾಸಲುರವರು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವರು ಐದು ಜನ ಶಾಸಕರು ಕಾಡಿನ ಭಾಗದ ಚಾಮರಾಜನಗರ ಜಿಲ್ಲೆಗೆ ಬರುವಂಥವರಾಗಿದ್ದಾರೆ. ಹಾಗಾಗಿ ಸರ್ಕಾರ ಇವರಿಗೆ ವಿಶೇಷವಾದಂತಹ ಎಚ್ಚರಿಕೆಯನ್ನು ತೆಗೆದುಕೊಂಡಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಗೃಹ ಖಾತೆಯ ಸಚಿವರಾದ ಶ್ರೀ ಆರ್.ರೋಷನ್‌ಬೇಗ್‌ರವರು ಮತ್ತು ಪೋಲೀಸ್ ಮಹಾ ನಿರ್ದೇಶಕರು ಆದ ಶ್ರೀನಿವಾಸಲುರವರು ಹಾಗೂ ಹೆಚ್ಚುವರಿ ಪೊಲೀಸ್ ನಿರ್ದೇಶಕರಾದ ಮಡಿಯಾಳ್‌ರವರು ಇತ್ತೀಚೆಗೆ ಮಲೆಮಹದೇಶ್ವರ ಬೆಟ್ಟದ ಬಂಡೀಪುರ ಅರಣ್ಯ ಪ್ರದೇಶಗಳಿಗೆ ಭೇಟಿ ನೀಡಿ ಬಂದನಂತರ ಸರ್ಕಾರ ಈ ತೀರ್ಮಾನವನ್ನು ಕೈಗೊಂಡಿದೆ ಎಂದು ಹೇಳಿದ್ದಾರೆ. ಈ ರೀತಿ ಇವರು ಹೇಳಿದ ಮೇಲೆ ವಿಶೇಷವಾದ ಏನೋ ಮಾಹಿತಿ ಇರಬಹುದೆಂದು ನನಗನಿಸುತ್ತಿದೆ. ಆದುದರಿಂದ, ಇದರಲ್ಲಿ ಚರ್ಚೆಯಾಗಬೇಕೆನ್ನುವುದಕ್ಕಿಂತ ಹೆಚ್ಚಿಗೆ ಇತ್ತೀಚಿನ ದಿವಸಗಳಲ್ಲಿ ವೀರಪ್ಪನ್ ಬಗ್ಗೆ ಸರ್ಕಾರದ ವ್ಯವಹಾರಗಳು ಹೊರಗಡೆ ನಡೆಯುತ್ತಿದೆ. ತಮಿಳುನಾಡಿನ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡುತ್ತಿದ್ದಾರೆ, ಮತ್ತೆ ವೀರಪ್ಪನ್ ಅವನೇ ಬಂದು ನಮಗೆ ಶರಣಾಗುತ್ತಿದ್ದಾನೆ, ಅವನು ಯಾವಾಗ ಶರಣಾಗುತ್ತಾನೆಂಬುದು, ಮತ್ತೆ ತಮಿಳುನಾಡಿನ ''ನಕ್ಕೀರನ್'' ಪತ್ರಿಕಾ ಸಂಪಾದಕ ಮೈಸೂರಿನ ನ್ಯಾಯಾಲಯಕ್ಕೆ ಬಂದಿರುವಂಥಾದ್ದು, ಈ ಎಲ್ಲಾ ವಿಷಯಗಳು ಒಂದರ ಹಿಂದೆ ಒಂದು ಹೊರಗಡೆ ನಡೆಯುತ್ತಿದೆ. ಈ ಸದನ ನಡೆಯುವಾಗ ಹೊರಗಡೆ ಇಂತಹ ವಿಚಾರಗಳು ಸಮಗ್ರವಾಗಿ ಚರ್ಚೆಯಾಗುತ್ತಿದೆ. ನಾನು ಹೇಳುವುದೇನೆಂದರೆ ಇದು ಬಹಳ ಪ್ರಾಮುಖ್ಯವಾದಂಥಾದ್ದು, ವೀರಪ್ಪನ್ ಬಗ್ಗೆ ಹಿಂದಿನ ಸರ್ಕಾರ ಮೂರು ದಿವಸಗಳಲ್ಲಿ ಹಿಡಿಯುತ್ತೇವೆ, ಒಂದು ಗಂಟೆಯಲ್ಲಿ ಹಿಡಿಯುತ್ತೇವೆಂದು ಸಾವಿರಾರು ಭರವಸೆಗಳನ್ನು ಕೊಟ್ಟುಕೊಂಡು ಬಂದಿದೆ. ಈಗ ನಿಮಗೆ ಅವನು ಶರಣಾಗತಿಯಾಗುವುದರ ಬಗ್ಗೆ ಬಂದಿರುವಂತಹ ಮಾಹಿತಿ ಏನು? ಅವನು ಕಳುಹಿಸಿರುವಂತಹ ಕ್ಯಾಸೆಟ್ ಯಾವುದು? ಮತ್ತೆ ಅವನ ಅತ್ಯಂತ ಪ್ರಮುಖವಾದಂತಹ ಎಡ-ಬಲ ಕೈಯಂತಿರುವ ನಾಲ್ಕು ಜನ ಭಂಟರನ್ನು ಸುಮಾರು ಒಂದು ವಾರದ ಹಿಂದೆ ಬಂಧಿಸಿರುವಂಥಾದ್ದು, ಈ ಎಲ್ಲವೂ ಇರುವಾಗ ಸರ್ಕಾರ ಈ ಸದನದ ಮುಂದೆ ಒಂದು ಹೇಳಿಕೆಯನ್ನು ಕೊಡಬೇಕು. ಅವನು ಶರಣಾಗುವುದು ನಿಜವೇ? ಇಲ್ಲವೇ? ಮತ್ತೆ ನಿಮ್ಮ ಟಾಸ್ಕಫೋರ್ಸ್ ಹಿಂದಕ್ಕೆ ತೆಗೆದುಕೊಂಡಿದ್ದೀರಾ? ಇದರಲ್ಲಿ ಏನು ನಡೆಯುತ್ತಿದೆ? ಏಕೆಂದರೆ ಇದರಲ್ಲಿ ನೂರಾರು ಜನರ ಹತ್ಯೆಯಾಗಿರುವಂಥಾದ್ದು, ಅನೇಕ ಕೋಟಿ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿರುವಂಥಾದ್ದು, ಈಗ ಏಕದಂ ವೀರಪ್ಪನ್ ಶರಣಾಗತಿಯಾಗುತ್ತಾನೆಂಬುದು ಇದೆಲ್ಲಾ ಹೊರಗಡೆ ನಡೆಯುತ್ತಿದೆ.

ಅಧ್ಯಕ್ಷರು: ಈ ವಿಷಯ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ, ಈಗ ಇದನ್ನು ಮುಕ್ತಾಯಮಾಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾವು ಯಾರೂ ರಕ್ಷಣೆ ಕೊಡಿ ಎಂದು ಕೇಳಿಲ್ಲ. ಆದರೆ ಮಾನ್ಯ ಮಂತ್ರಿಗಳು ನಾವು ರಕ್ಷಣೆ ಕೊಡಬೇಕಾಗುತ್ತದೆಂದು ಹೇಳಿದ್ದಾರೆ. ಅದು ಏನು ಮಾಹಿತಿ ಎಂಬುದು ನಮಗೆ ಗೊತ್ತಿಲ್ಲ. ನಾನಂತೂ ಎಲ್ಲಾ ಕಡೆಗಳಲ್ಲೂ ಒಬ್ಬನೇ ಓಡಾಡುತ್ತಿದ್ದೇನೆ. ಆದುದರಿಂದ ಈ ಮಾಹಿತಿ ಏನು ಎಂಬುದನ್ನು ಸದನದ ಮುಂದೆ ಹೇಳಬೇಕಲ್ಲ?

ಅಧ್ಯಕ್ಷರು: ಮಾನ್ಯ ಗೃಹ ಮಂತ್ರಿಗಳಾದ ಶ್ರೀ ಆರ್.ರೋಷನ್‌ಬೇಗ್‌ರವರು ಬರಲಿ, ಅದೇನು ಎಂಬ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಗೃಹ ಮಂತ್ರಿಗಳಾದ ಶ್ರೀ ಆರ್.ರೋಷನ್ ಬೇಗ್‌ರವರು ಬಂದ ಮೇಲೆ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಿಸುತ್ತೇನೆ.

15) ರಾಜ್ಯ ಸರ್ಕಾರದಿಂದ ಜಿಲ್ಲಾ ಟ್ರೆಜರಿಗಳಲ್ಲಿ ಎರಡು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಇರುವಂಥ ಚೆಕ್‌ಗಳನ್ನು ತಡೆಹಿಡಿದಿರುವ ಬಗ್ಗೆ.

ಶ್ರೀ ಎನ್.ಯೊಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದಿಂದ ಜಿಲ್ಲಾ ಟ್ರೆಜರಿಗಳಲ್ಲಿ ಎರಡು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಇರುವಂತಹ ಚೆಕ್‌ಗಳನ್ನು ತಡೆ ಹಿಡಿಯುವಂತಹ ಆದೇಶವನ್ನು ಏನಾದರೂ ಕೊಟ್ಟಿದ್ದೀರಾ? ಏಕೆಂದರೆ ನನ್ನ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ 24ಲಕ್ಷ ರೂಪಾಯಿಗಳ ಚೆಕ್ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದಂತೆ ಇದೆ. ಇದು 38 ದಿವಸಗಳಿಂದ ಜಿಲ್ಲಾ ಟ್ರೆಜರಿಯಲ್ಲಿ ತಡೆ ಹಿಡಿಯಲಾಗಿದೆ. ಅಲ್ಲಿಂದ ರಿಲೀಜ್ ಆಗುತ್ತಾ ಇಲ್ಲ. ಇದಕ್ಕೆ ಕಾರಣವೇನು ಎಂದು ಗೊತ್ತಿಲ್ಲ. ಅದಕ್ಕೆ ತಾವು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಆ ರೀತಿ ಏನೂ ಇಲ್ಲ, ಮಾರ್ಚ್ 15ರವರೆಗೆ ಎಲ್ಲಾ ಬಿಲ್‌ಗಳನ್ನು ಪಾವತಿ ಮಾಡಬೇಕೆಂದು ಹೇಳಿದ್ದೇವೆ. ಆ ರೀತಿಯಾಗಿ ಏನಾದರೂ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಮಾಡಿಸಿ ಕೊಡುತ್ತೇನೆ.

16) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜಾತಿಯ ಸುಳ್ಳು ಸರ್ಟಿಫಿಕೇಟ್ ನೀಡಿ ತಾಲ್ಲೂಕ್ ಪಂಚಾಯತ್ ಸದಸ್ಯರಾಗಿ ಅಧ್ಯಕ್ಷರಾಗಿರುವಂಥ ಪರಿಸ್ಥಿತಿ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜಾತಿಯ ಸುಳ್ಳು ಸರ್ಟಿಫಿಕೇಟ್‌ಗಳನ್ನು ಪ್ರೊಡ್ಯೂಸ್ ಮಾಡಿ ತಾಲ್ಲೂಕು ಪಂಚಾಯತ್ ಸದಸ್ಯರು ಆಗಿ, ಅಧ್ಯಕ್ಷರೂ ಆಗಿ ಆಗಿರುವಂತಹ ಸುದ್ದಿ ಬಂದಿದೆ. ಇದಕ್ಕೆ ಜಿಲ್ಲಾ ಮಟ್ಟದ ಜಾತಿ ಪರಿಶೀಲನಾ ಸಮಿತಿ ಈ ರೀತಿ ಸುಳ್ಳು